**ಓ.ಎಸ್. ನಂ.*80/2023***

**ಪಿಡಬ್ಲ್ಯೂ*:01***

**ಇಂದು ದಿನಾಂಕ*:25.10.2024* ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**<u>ಪಾಟೀ ಸವಾಲು : ಪ್ರತಿವಾದಿಗಳ ಪರ ಶ್ರೀ.ಪಿ.ಪಿ.ವಕೀಲರಿಂದಃ</u>**

ಪ್ರತಿವಾದಿ 1 ಮತ್ತು 2 ರವರು ನನ್ನ ತಾಯಿ ಮತ್ತು ತಮ್ಮ. ಈಗ ನಾನು ವಾಸ ಇರುವ ಸ್ಥಳದಿಂದ ದಾವಾ ಐಟಂ.1 ನೇ ಆಸ್ತಿಗೆ 15 ಕಿ.ಮಿ. ದೂರದಲ್ಲಿ ಇದೆ. ಈಗ ನಾನು ವಾಸ ಇರುವ ಸ್ಥಳದಲ್ಲೇ ಕಳೆದ 15 ವರ್ಷದಿಂದ ವಾಸವಿದ್ದೇನೆ. ಆ ಮನೆಯನ್ನು ನಮ್ಮ ಮಾವ 15 ವರ್ಷದ ಹಿಂದೆ ನನ್ನ ಪತ್ನಿ ಹೆಸರಿನಲ್ಲಿ ಖರೀದಿಸಿ ಕೊಟ್ಟಿದ್ದಾರೆ. ದಾವಾ ಐಟಂ.1 ರ ಆಸ್ತಿ ನನ್ನ ತಾತ ಸುಬ್ಬನಾಯಕ ರವರಿಗೆ ಸೇರಿತ್ತು. ನನ್ನ ತಾತನಿಗೆ ಅವರ ತಂದೆಯಿಂದ ಬಂದಿತ್ತು. ನನ್ನ ಮುತ್ತಾತನಿಂದ ನಮ್ಮ ತಾತನಿಗೆ ಆಸ್ತಿ ಬಂದಿತ್ತು ಅಂತ ತೋರಿಸಲು ದಾಖಲೆ ಹಾಜರು ಪಡಿಸಿಲ್ಲ. ನನ್ನ ತಾತ ಸುಬ್ಬನಾಯಕನಿಗೆ 5 ಜನ ಮಕ್ಕಳು. 6 ಎಕರೆ ನನ್ನ ತಾತನ ಹೆಸರಿನಲ್ಲಿ ಇತ್ತು. ಆ ಜಮೀನು ನನ್ನ ತಂದೆ ಮತ್ತು ದೊಡ್ಡಪ್ಪನವರ ನಡುವ ವಿಭಾಗ ಆಗಿದೆ. ವಿಭಾಗ ಬರವಣಿಗೆ ಆಗಿದೆಯೇ ಅಂತ ನನಗೆ ಗೊತ್ತಿಲ್ಲ. ವಿಭಾಗ ಆಗಿರುವುದಾಗಿ ನನ್ನ ತಂದೆ ಹೇಳಿದ್ದರು. ಸುಮಾರು 15 ವರ್ಷದ ಹಿಂದೆಯೇ ವಿಭಾಗ ಆಗಿತ್ತು. ಸರ್ವೆ ಮಾಡಿಸಿ ವಿಭಾಗ ಮಾಡಿಸಿಕೊಂಡಿದ್ದಾರೆ. ಆ ಬಗ್ಗೆ ದಾಖಲೆ ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ದಾವಾ ಆಸ್ತಿಗಳು ಈಗಲೂ ಸಹಾ ದೇವನಾಯಕ ಮತ್ತು ರಾಮನಾಯಕ ಜಂಟಿಯಾಗಿವೆ ಎಂದರೆ ಸರಿ. ಈ ಕೇಸು ಹಾಕಿರುವುದು ನನ್ನ ದೊಡ್ಡಪ್ಪ ದೇವನಾಯಕರಿಗೆ ಗೊತ್ತು. ಸದರಿ ದೇವನಾಯಕರವರನ್ನು ಈ ಕೇಸಿನಲ್ಲಿ ಪಕ್ಷಗಾರರನಾಗಿ ಮಾಡಿಲ್ಲ. ದಾವಾ ಐಟಂ.1 ರ ಆಸ್ತಿ ನಮ್ಮ ತಂದೆ ಮತ್ತು ದೊಡ್ಡಪ್ಪನ ಜಂಟಿ ಹೆಸರಿನಲ್ಲಿ ಇರುವುದರಿಂದ ಭಾಗಾಂಶ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಐಟಂ.2 ರ ಆಸ್ತಿ ನನ್ನ ತಾಯಿ ಮತ್ತು ಅವರ ಸಹೋದರರರಿಗೆ ವಿಭಾಗದ 2020-2021ರ ಮೂಲಕ ಬಂದಿದೆ. ದಾವಾ ಐಟಂ.2 ರ ಆಸ್ತಿಗೆ ಸಂಬಂಧಿಸಿದಂತೆ ನಮ್ಮ ಮಾವಂದಿರಾದ ಪುಟ್ಟನಾಯ ಹಾಗೂ ಬಸವನಾಯಕ ವಿಭಾಗಕ್ಕಾಗಿ ಒ.ಎಸ್.74/2009 ರಲ್ಲಿ ಮಡಿಕೇರಿ ನ್ಯಾಯಾಲಯದಲ್ಲಿ ಕೇಸು ಹಾಕಿದ್ದಾರೆ ಎಂದರೆ ಸರಿ. ನನ್ನ ತಾಯಿಯ ತಂದೆ ಹೆಸರು ಸಣ್ಣಪ್ಪ. ಒ.ಎಸ್.74/2009 ರಲ್ಲಿ ಈ ಕೇಸಿನ ಐಟಂ.2 ರ ಆಸ್ತಿ ನನ್ನ ತಾಯಿಗೆ ಬಂದಿದೆ ಎಂದರೆ ಸರಿ.

**ಓ.ಎಸ್. ನಂ.80/2023**

**ಪಿಡಬ್ಲ್ಯೂ:01**

ದಾವಾ ಐಟಂ.2 ರ ಆಸ್ತಿ ನನ್ನ ತಾಯಿಗೆ ವಿಭಾಗದ ಮೂಲಕ ಬಂದಿರುವ ಕಾರಣ ಅದು ಅವರ ಸ್ವಂತ ಆಸ್ತಿಯಾಗಿರುವುದರಿಂದ ನಮಗೆ ಭಾಗಾಂಶದ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ದಾವೆಯಲ್ಲಿ ಇರುವ ಎಲ್ಲಾ ಆಸ್ತಿಗಳಿಗೆ ಸಂಬಂಧಿಸಿದಂತೆ ಒ.ಎಸ್.119/2021ರಂತೆ ಇದೇ ಪಿರಿಯಾಪಟ್ಟಣದ ನ್ಯಾಯಾಲಯದಲ್ಲಿ ವಿಭಾಗಕ್ಕಾಗಿ ಕೇಸು ಹಾಕಿದ್ದೆ ಎಂದರೆ ಸರಿ. ಆ ಕೇಸಿನಲ್ಲಿ ನಾನು ಹಾಜರು ಆಗದಿದ್ದ ಕಾರಣ ಆ ಕೇಸು ವಜಾ ಆಗಿದೆ. ಆ ನಂತರ ಒ.ಎಸ್.59/2021ರಲ್ಲಿ ಕುಶಾಲನಗರದ ನ್ಯಾಯಾಲಯದಲ್ಲಿ ಈ ಕೇಸಿನ ಐಟಂ.2ರ ಆಸ್ತಿಗೆ ದಾವೆ ಹಾಕಿದ್ದೇನೆ ಎಂದರೆ ಸರಿ. ಆ ಕೇಸು ಕೂಡ ವಜಾ ಆಗಿದೆ. ಆ ಕೇಸಿನಲ್ಲಿ ರಾಜಿ ಮಾಡಿಕೊಳ್ಳುವುದಾಗಿ ಹೇಳಿ 1ನೇ ಪ್ರತಿವಾದಿಯಿಂದ 1 ಲಕ್ಷ ರೂಪಾಯಿ ಪಡೆದು ನಾನೇ ವಾಪಸ್ಸು ತೆಗೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಈ ಕೇಸಿನ ಐಟಂ.1ರ ಆಸ್ತಿಯನ್ನು 2ನೇ ಪ್ರತಿವಾದಿಗೆ ಬಿಟ್ಟು ಕೊಡುವುದಾಗಿ ಹೇಳಿ ನಾನು ಮತ್ತು ನನ್ನ ಅಣ್ಣ 20 ಲಕ್ಷ ಪಡೆದುಕೊಂಡು ಒ.ಎಸ್.59/2021ರ ದಾವೆಯನ್ನು ವಾಪಸ್ಸು ಪಡೆದಿದ್ದೇವೆ ಎಂದರೆ ಸರಿಯಲ್ಲ. ಅದರ ಪ್ರಕಾರ ದಿನಾಂಕಃ 05-04-2022 ರಂದು 6 ಲಕ್ಷ ಹಾಗೂ ದಿನಾಂಕಃ 19-04-2022 ರಂದು 6 ಲಕ್ಷ ರೂಪಾಯಿ ಸೇರಿದಂತೆ ಒಟ್ಟು 12 ಲಕ್ಷ ರೂಪಾಯಿಯನ್ನು ನನ್ನ ಬ್ಯಾಂಕ್ ಖಾತೆಗೆ ಪ್ರತಿವಾದಿಗಳು ಹಾಕಿರುತ್ತಾರೆ ಎಂದರೆ ಸರಿ. ಆ ನಂತರ ದಿನಾಂಕಃ15-05-2021 ರಂದು ಪ್ರತಿವಾದಿಗಳು 2 ಲಕ್ಷ ರೂಪಾಯಿಯನ್ನು ನನ್ನ ಕೈಗೆ ಕೊಟ್ಟಿದ್ದಾರೆ ಎಂದರೆ ಸರಿ. ದಾವಾ ಐಟಂ.1 ರ ಆಸ್ತಿಯ ಮೇಲೆ ಹಕ್ಕು ಬಿಡುಗಡೆಯ ಪತ್ರ ಮಾಡಿಕೊಡುವುದಾಗ ಒಟ್ಟು15 ಲಕ್ಷ ರೂಪಾಯಿ ಪಡೆದಿದ್ದೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳು ನಮ್ಮ ಒಟ್ಟು ಕುಟುಂಬದ ಆಸ್ತಿಗಳು ಅಲ್ಲ ಮತ್ತು ನಾನು ಅದರಲ್ಲಿ ಜಂಟಿ ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**

**ಪಿರಿಯಾಪಟ್ಟಣ**